ಯಶಸ್ಸು ಕಾಣುತ್ತೇವೆಂದು ದಿನವೂ ಯತ್ನಿಸುವರು. 'ಏಯ್ ಯಬರೇಶಿ, ಎಷ್ಟೊತ್ತಿನ ತನಕ ಹಲ್ಲು ತಿಕ್ಕಾಂವ ಅದೀ ನೀನು, ಏನ್ ಮೈಯಾಗ ಎಚ್ಚರ ಐತಿಲ್ಲೋ? ಹೋಗಬಾ ಇನ್ನ, ಸೂರ್ಯ ನೆತ್ತಿ ಮ್ಯಾಲ ಬಂದಗಿಂದಾನು.' ಅಜ್ಜನೊ, ಅವ್ವನೊ, ಕಾಕಾನೊ, ದೊಡ್ಡಪ್ಪನೊ, ಬಾಜೂಮನಿ ಚಿಗವ್ವಳೊ ಹೀಗೆ ಯಾರಾದರೂ ಇವರನ್ನು ಎಚ್ಚರಿಸಿದಾಗಲೆ ಅವರು ಈ ಜಗತ್ತಿಗೆ ಬಂದು ಬಡಾಬಡಾ ಬಾಯಿ ಮುಕ್ಕಳಿಸಿ ಉಗುಳುವರು. ಕೆಲವರು ಇದ್ದಿಲನ್ನು ದಿನವಿಡೀ ಕುಟ್ಟಿ ಕುಟ್ಟಿ ನುಣ್ಣಗೆ ಪುಡಿ ಮಾಡಿ ಅದರೊಡನೆ ಉಪ್ಪು ಸಹ ಬೆರೆಸಿ ಹಿಂದೊಮ್ಮೆ ತಂದಿದ್ದ ಹಲ್ಲುಪುಡಿಯ ಖಾಲಿ ಪ್ಲಾಸ್ಟಿಕ್ ಡಬ್ಬಿಯಲ್ಲಿ ಹಾಕಿ ಇಡುವರು. ಈ ರಗಳೆಯೆಲ್ಲ ಯಾಕೆ ಬೇಕೆಂದು ಕೆಲವರು ಬಯಲ ಕಡೆ ಹೋದಾಗಲೆ ಅಲ್ಲೆ ನಾಲ್ಕು ಬೇವಿನಕಡ್ಡಿಯನ್ನೊ, ಹೂ ಬಿಟ್ಟಿರುವ ಬೇವಿನೆಸಳನ್ನೊ ಕಿತ್ತುಕೊಂಡು ಹಲ್ಲಿನಲ್ಲಿ ನುರಿಸುವ ಸಂದರ್ಭಗಳೂ ಇರುತ್ತಿದ್ದವು. ಅತ್ತಿಯ ಹಣ್ಣಿನಲ್ಲಿಯ ಸಣ್ಣ ಸಣ್ಣ ಹುಳಗಳನ್ನು ಹೇಗೂ ಕಾಣಬಹುದು. ಆದರೆ ಕಣ್ಣಿಗೆ ಕಾಣದಂತೆ ಹಲ್ಲುಗಳಲ್ಲಿ ಹುದುಗಿರುವ ಹುಳುಗಳು ಒಳಗೊಳಗೆ ಕೊರೆದಿರುವ ತೂತುಗಳನ್ನು ಕಂಡುಹಿಡಿಯುವುದು ಎಂತಹ ವಿಜ್ಞಾನಿಗೂ ಅಸಾಧ್ಯವೆಂದು ಬೈಲಹೊಂಗಲದ ಮುಕ್ತಿಮಠ ಎನ್ನುವ ಹಲ್ಲಿನ ಡಾಕ್ಟರರು ಇವರಿಗೆ ಮನವರಿಕೆ ಮಾಡಿಸಿದ್ದರು.

'ನಮ್ಮ ಮುಕ್ತಿಮಠ ಡಾಕ್ಟರರು ನಮ್ಮ ಹಲ್ಲು ಮುಟ್ಟಿದ್ರ ಸಾಕು, ಆರಾಮ ಆಗ್ತದ. ಹಲ್ಲುಗಳಿಗೆ ಒಂದು ರೀತಿ ನೋವಿನಿಂದ ಮುಕ್ತಿ ಸಿಗ್ತದ' ಎಂದು ಅವರನ್ನು ಮನಸಾರೆ ಹೊಗಳುತ್ತಿದ್ದರು. ಹೀಗಾಗಿ ಹಲ್ಲುನೋವಿಗೆ ಮುಕ್ತಿ ಕೊಡುವ ಮುಕ್ತಿಮಠ ಎಂದೇ ಅವರು ಪ್ರಸಿದ್ಧರಾಗಿದ್ದರು. ಆ ಡಾಕ್ಟರರು ಊರಿನವರಿಗೆ ಎಷ್ಟು ಪರಿಚಿತರಾದರೆಂದರೆ ಮಲ್ಲೂರಿನ ಹಲವಾರು ಜನರ ಹಲ್ಲುಗಳು ಹೀಗೀಗೆ ಎಂದು ರೋಗಿಗಳನ್ನು ನೋಡದೆಯೆ ಅವರು ಹೇಳಬಲ್ಲವರಾದರು. ದುಂಡಪ್ಪನ ಹಲ್ಲು ಅಚ್ಚ ಕೆಂಪಗಾಗಿ ಮುಂದಕ್ಕೆ ಬಾಗಿವೆ. ರುದ್ರಣ್ಣನ ಹಲ್ಲುಗಳು ಸೊಟ್ಟಗಾಗಿ ಎತ್ತೆತ್ತಲೋ ತಿರುವಿದಂತಿವೆ. ಗಿರಿಜವ್ವನ ದವಡೆಹಲ್ಲಿನ ಹುಳುಕುಗಳಲ್ಲಿ ಇಡೀ ಪಾತಾಳವೇ ಕಾಣುತ್ತದೆ. ಹರೆಯದಲ್ಲಿಯೇ ಗೆಳೆಯನೊಂದಿಗಿನ ಜಗಳದಲ್ಲಿ ಮುಂದಿನ ಮೂರು ಹಲ್ಲುಗಳ ಅರ್ಧ ಭಾಗ ಕಳೆದುಕೊಂಡಿದ್ದಾನೆ ಮಲ್ಲಿಕಾರ್ಜುನ! ಗಂಡ ಹೆಂಡತಿಯ ಜಗಳದಲ್ಲಿ ಮಲ್ಲಿಕಾರ್ಜುನನ ಹೆಂಡತಿ ಪಾರವ್ವ ಒಂದೊಂದ ಸಲ ಜೋರು ಮಾಡುತ್ತಾಳಂತೆ. 'ಸುಮ್ಮನೆ ಕುಂದ್ರು. ಇಲ್ಲಾಂದ್ರ ಮುಂದಿನ ಮೂರು ಹಲ್ಲು, ಏನು ಅರ್ಧಾರ್ಧ ಉಳಿದಾವು, ಅಂವನ್ನೂ ಪೂರಾ ಮುರಿದು ನಿನ್ನ ಕೈಯಾಗ ಕೊಡತೇನಿ ನೋಡು.'

ಹೀಗೆ ಮಲ್ಲೂರಿನ ಜನರ ಹಲ್ಲುಗಳ ಬಗ್ಗೆ ಒಂದು ಬೃಹತ್ ಗ್ರಂಥ ಬರೆಯಬಹುದೆಂದು ಮುಕ್ತಿಮಠ ಡಾಕ್ಟರರಿಗೆ ಅನಿಸುವುದು. ಮಲ್ಲೂರಿನ ಇತಿಹಾಸ ಒಂದು ರೀತಿಯದ್ದಾದರೆ ಮುರಗೋಡು ಮಂದಿಯ ಹಲ್ಲುಗಳ ಚರಿತ್ರೆ ಮತ್ತೊಂದು ರೀತಿಯದಿತ್ತು.



## ಕಳೆದ ಸಂಚಿಕೆಯಲ್ಲಿ

ಮಾಯಕ್ಕನಿಗೆ ನಾಗಣ್ಣ ಯಾವಾಗಲೂ ಸಹಾಯ ಮಾಡುತ್ತಿದ್ದ. ನೀರನ್ನು ಕೊಡದಲ್ಲಿ ತುಂಬಿಸಿ ಎಷ್ಟೇ ಭಾರವಾದರೂ ಹೊರುತ್ತಿದ್ದ. ಅವನ ಹೆಗಲು ಉಕ್ಕಿನದಿರಬೇಕು, ಚರ್ಮದ್ದು ಆಗಿದ್ದರೆ ಸವೆದು ಹೋಗುತ್ತಿತ್ತು ಎಂದು ಮಾಯಕ್ಕ ಹೇಳಿದ್ದೂ ಇದೆ. ಪಾತ್ರೆ ತೊಳೆಯುವುದರಲ್ಲೂ ನಾಗಣ್ಣ ನಿಸ್ಸೀಮ. ಹೀಗಾಗಿ ಮಾಯಕ್ಕನಿಗೆ ನಾಗಣ್ಣ ಎಂದರೆ ಇಷ್ಟ. ಪಂಚಾಯಿತಿ ಚುನಾವಣೆಯಲ್ಲಿ ಮಾಯಕ್ಕ ಬಹುಮತ ಪಡೆದದ್ದು ಸಿದ್ದಣ್ಣ, ಸೋಮಣ್ಣ ಅವರಿಗೆ ನುಂಗಲಾರದ ತುತ್ತಾಗಿತ್ತು. ಮಾಯಕ್ಕ ಸಿದ್ದಣ್ಣನಿಗೆ ತಾಯಿ ಸಮಾನ ಅತ್ತಿಗೆಯೇ ಆಗಿದ್ದರೂ, ಚುನಾವಣೆಯಲ್ಲಿ ಸೋಲು ಅನುಭವಿಸಿದ್ದು ಅವಮಾನವಾಗಿ ಮಾಯಕ್ಕಳನ್ನು ರಾಕ್ಷಸಿ ಎಂದು ದ್ವೇಷ ಸಾಧಿಸಲಾರಂಭಿಸುತ್ತಾನೆ. ನಾಗಣ್ಣ ಮಾಯಕ್ಕ ಹೇಳಿದ ಎಲ್ಲ ಕೆಲಸವನ್ನು ಪಾಲಿಸುವುದರಿಂದ ನಾಗಣ್ಣನ ಮೇಲೆ ಊರ ಜನರಿಗೆ ಅಸಮಾಧಾನ ಉಂಟಾಗುತ್ತದೆ. ಮಾಯಕ್ಕ ಖರ್ಚು ಮಾಡೋದು ದೇವಪ್ಪ ದುಡಿದ ದುಡ್ಡನ್ನು ಎಂದು ಗೇಲಿ ಮಾಡುತ್ತಾರೆ.

ಕೆಲವು ಸಾಮ್ಯತೆ, ಕೆಲವು ವ್ಯತ್ಯಾಸಗಳನ್ನು ಹೀಗೆ ಎಲ್ಲ ಊರುಗಳ ಹಲ್ಲುಗಳ ಪಟ್ಟಿ ಮಾಡುತ್ತ ಹೋಗಬಹುದೆಂದು ಅವರಿಗೆ ಅನಿಸಿತ್ತು. ದ್ವೇಷದಿಂದ ಹಲ್ಲು ಮಸೆದು ಅನೇಕರ ಹಲ್ಲುಗಳು ದುರ್ಬಲವಾಗಿದ್ದವು. ಅಸೂಯೆಯನ್ನು ಬೆಳೆಸಿಕೊಂಡು ಅವು ಅಶಕ್ತವಾಗಿದ್ದವು. ಮುಕ್ತಿಮಠ ಅವರು ದಂತವೈದ್ಯರಾಗಿರುವುದರ ಜೊತೆಗೆ ಮನೋವೈದ್ಯರಾಗಿಯೂ ಜನಪ್ರಿಯವಾಗತೊಡಗಿದ್ದರು. ಅಲ್ಪ ಸಮಯದಲ್ಲಿಯೆ ಇಂತಹ ಹಲ್ಲುಗಳನ್ನು ಹೊಂದಿರುವವರ ಸ್ವಭಾವ ಹೀಗ್ಹೀಗೆ ಎಂದು ಅವರು ತರ್ಕ ಮಾಡಬಲ್ಲವರಷ್ಟು ಪ್ರಾವೀಣ್ಯತೆ ಗಳಿಸಿದರು. ಹಲ್ಲುಗಳ ಆಕಾರ, ಶೈಲಿ, ಅವುಗಳಿಗೆ ಇರುವ ಕಾಯಿಲೆ, ನೋವುಗಳಿಂದ ಆ ರೋಗಿಗಳ ಮನಸ್ಸನ್ನು ಅವರು ಓದಬಲ್ಲವರಾದರು. ಡಾಕ್ಟರರ ಹತ್ತಿರ ರೋಗಿಗಳು ಹೋಗದಿದ್ದರೂ ನಡೆಯುತ್ತಿತ್ತು. ಅವರ ಪರಿಚಿತರು, ಸಂಬಂಧಿಕರು ಹೋಗಿ ಹೀಗ್ಹೀಗೆ, ಇಷ್ಟು ದಿನದಿಂದ ನೋವು ಎಂದು ವಿವರ ಹೇಳಿದರೆ ಸಾಕು ಮುಕ್ತಿಮಠರು ಅದಕ್ಕೆ ತಕ್ಕಂತೆ ಔಷಧ, ಗುಳಿಗೆ ಕೊಡುವರು.

'ಅಲ್ರಿ, ಸಾಯೇಬ್ರರ, ನೋಡಿ, ಈ ಗುಳಿಗೆ ಔಷಧಿ ನಡೀತೈತೋ, ಇಲ್ಲೋ?' ಎಂದು ಸಂಬಂಧಿಕರು ಅನುಮಾನ ವ್ಯಕ್ತಪಡಿಸಿದರೆ ಡಾಕ್ಟರರು ನಗುತ್ತ 'ನಮ್ಮ ದೇವರ ಸತ್ಯ ನಮಗೆ ತಿಳಿಯಲಾರದ್ದೇನು? ನೀವು ಏನೂ ಚಿಂತೆ ಮಾಡಬ್ಯಾಡ್ರಿ. ಹೋಗಿ ಕೊಡ್ರಿ. ಆರಾಮ ಆಗಲಿಲ್ಲಂದ್ರ ಬಂದು ನನಗ ಹೇಳ್ರಿ. ಒಂದು ವೇಳೆ ನಾನು ಕೊಟ್ಟ ಔಷಧಿ ತಪ್ಪಾತು ಅಂದ್ರ, ನನ್ನ ಹಲ್ಲು ಕೀಳುವಂತ್ರೆ... ನಡಿತೈತಿ.' ಆ ಮಾತಿಗೆ ಡಾಕ್ಟರರು ಮತ್ತು ರೋಗಿಗಳು ಇಬ್ಬರೂ ನಗುವರು. ಊರಲ್ಲಿ ಶಾಲಾ ಕೋಣೆ ಕಟ್ಟಿಸಲು ದೇಣಿಗೆ ಕೇಳಲು ಬಂದಿದ್ದ ಮಾಯಕ್ಕನ ಮುಂದೆ ಈ ಕತೆಯನ್ನೆಲ್ಲ ಹೇಳಲು ಆಕೆಗೆ ನಕ್ಕು ನಕ್ಕು ಸಾಕಾಯಿತು.

ಮಲ್ಲೂರಿನ ಪಕ್ಕದ ಹಳ್ಳಿಯವರೇ ಆಗಿದ್ದ ಮುಕ್ತಿಮಠ ಡಾಕ್ಟರರ ತಂದೆತಾಯಿಗಳು ಬಹು ಹಿಂದೆಯೇ ಬೈಲಹೊಂಗಲಕ್ಕೆ ಹೋಗಿ ನೆಲೆಸಿದ್ದರು. ಕೆಲಸವಿಲ್ಲದಿದ್ದರೂ ಆ ಡಾಕ್ಟರರ ಹತ್ತಿರ ಹೋಗುವುದು ಊರವರಿಗೆ ಒಂದು ರೀತಿಯ ರೋಗವಾಗಿತ್ತು. ತಮ್ಮ ಹಲ್ಲುಗಳಿಗೆ ಏನೋ ಆಗಿದೆ ಎನಿಸುವುದು. ಹಲ್ಲುನೋವು ಅಲ್ಲದೆ ತಲೆನೋವು, ಜ್ವರ, ನೆಗಡಿ, ಕೆಮ್ಮಿಗೂ ಅವರಲ್ಲಿ ಔಷಧ ಕೇಳುತ್ತಿದ್ದರು. 'ಅಲ್ಲಪಾ, ನಾನು ಹಲ್ಲಿನ ಡಾಕ್ಟರ್. ಚಳಿಜ್ವರ, ಅದುಇದು ಅಂತ ನನ್ನ ಕಡೆ ಬರಬ್ಯಾಡ್ರಿ...' ಅವರು ಪದೇ ಪದೇ ಹೇಳಿದರೂ ಜನ ಮಾತ್ರ 'ಮೈ ಯಾಕೋ ಬಿಸಿಯಾಗೇತಿ ನೋಡ್ರಿ ಸಾಯೇಬ್ರ' ಎಂದೇ ಮಾತುಕತೆಯನ್ನು ಆರಂಭಿಸುತ್ತಿದ್ದರು. ಬೈದರೂ ಸರಿ, ಹೊಗಳಿದರೂ ಸರಿ, ಅವರಲ್ಲಿ ಪುಕ್ಕಟೆ ಔಷಧಗುಳಿಗೆ ತಂದು ನುಂಗದಿದ್ದರೆ ಇವರಿಗೆ ಉಂಡ ಊಟ ಅರಗುತ್ತಿರಲಿಲ್ಲ. ನರಕದ ದರ್ಶನ ಮಾಡಿಸುತ್ತಿದ್ದ ದಂತನೋವು ನಿವಾರಿಸಿದ್ದಕ್ಕೆ, ಕಡಿಮೆ ಮಾಡಿದ್ದಕ್ಕೆ ಡಾಕ್ಟರರಿಗೆ ಹತ್ತಾರು ಸಲ ನಮಸ್ಕಾರ ಹೇಳುವರು. ಆದರೆ ದುಡ್ಡು ಕೊಡುವಾಗ ಮಾತ್ರ ಅವರ ಕೈ ಉದ್ದವಾಗುತ್ತಿರಲಿಲ್ಲ. ಆ ಕಿಸೆ, ಈ ಕಿಸೆ, ಒಳಗಿನ ಮಂಡಂಗಿಯ ಕಿಸೆ ಹುಡುಕಾಡಿ ಹತ್ತು ರೂಪಾಯಿ ತೆಗೆಯುವರು.

'ಅಲ್ಲೋ, ನಿಮ್ಮ ಅಜ್ಜ ಹತ್ತು ರೂಪಾಯಿ ಕೊಡ್ತಿದ್ದ. ಈಗ ನೀನೂ ಅದನ್ನೇ ಮುಂದುವರಿಸ್ತಿ ಅಂದ್ರ ಹೆಂಗ? ನೋವು ಹೋದ ಮ್ಯಾಲ ರೊಕ್ಕ ಯಾಕ ಕೊಡಬೇಕು ಅನಿಸ್ತೈತೇನು? ಬ್ಯಾರೆ ಡಾಕ್ಟರರ ಹತ್ತಿರ ಹೋಗಿದ್ದೆಂದ್ರ 'ಹೂಂ, ಬಾಯಿ ಓಪನ್ ಮಾಡು' ಅಂತ ಹೇಳಾಕ ಮೂವತ್ತು ರೂಪಾಯಿ ತಗೋತಿದ್ರು. ಗೊತ್ತೇನು? ಅಷ್ಟೆಲ್ಲ ಟ್ರೀಟಮೆಂಟ್ ಕೊಟ್ಟೇನಿ. ಕನಿಷ್ಠ ನೂರು ರೂಪಾಯಿ ಆಗ್ತದ.'

'ಸಾಯೇಬ್ರ, ನೀವು ನಮ್ಮ ಊರವರು. ಮಣ್ಣಿನ ಮಗ ಎಂದಾದ್ರೂ ಅಣ್ಣ ತಮ್ಮಂದಿರ ಹತ್ತಿರ ರೊಕ್ಕ ಇಸಗೊಳ್ತಾನೇನು?' ಇವರ ಮಾತು ಕೇಳಿ ಡಾಕ್ಟರರಿಗೆ ತಲೆನೋವು ಮಾತ್ರವಲ್ಲದೆ ಹಲ್ಲುನೋವು ಸಹ ಸುರುವಾಗುತ್ತಿತ್ತು. ತಮ್ಮ ಊರು, ತಮ್ಮ ಮನೆ, ತಮ್ಮ ಬಂಧುಬಳಗ ಎನ್ನುವುದೆ ಕೆಟ್ಟದ್ದು ಎನಿಸಿ ಪೇನ್‌ಕಿಲ್ಲರ್ ನುಂಗುವರು. ಈ ಹೊಲಮನೆ ಬಿಟ್ಟು ಬೆಂಗಳೂರು ಮುಂಬೈ ಕಡೆಗೆ ಹೋಗಿಬಿಡಬೇಕು ಎನಿಸುವುದು. ತಮ್ಮೂರು ಎನ್ನುವ ಮೋಹ ಒಮ್ಮೊಮ್ಮೆ ಎಷ್ಟೊಂದು ತೊಂದರೆ ಒಡ್ಡುವುದು! ಡಾಕ್ಟರರು ಇನ್ನೊಂದು ಪೇನ್‌ಕಿಲ್ಲರ್ ನುಂಗುವರು! (ಸಶೇಷ)